ಕಲ್ಪನೆ ಕಾವ್ಯ

## ಇಲ್ಲಿರುವುದು ಸುಮ್ಮನೆ

ನರೆತ ಕೂದಲ ಮುದುಕಿ ನಾನು
ಆದರೆ ಹಸಿವೋ ಚಿರಯೌವ್ವನೆ!
ಕುಳಿತಿರುವೆ ಇಂದು ಹಸಿಹಸಿರು
ಸೊಪ್ಪಿನ ಮುಂದೆ
ಬಾಡಲೇಬೇಕು ಇದರಂತೆ ಒಂದು ದಿನ.
ಈ ತಾವು ನನ್ನದಲ್ಲ
ಇಂದಿಲ್ಲಿ, ನಾಳೆ ಇನ್ನೆಲ್ಲಿಯೋ...
ಆದರೀ ಹೊಟ್ಟೆಗೆ ನಾಚಿಕೆಯಿಲ್ಲ,
ಬಡವಬಲ್ಲಿದರೆಂಬ ಭೇದವಿಲ್ಲ.
ನಾಳೆ ತಿಳಿಯದ ವೇಳೆ, ಸಾಗಲೇಬೇಕಿಲ್ಲಿ
ಸುಖದುಃಖ ಎಂಬ ಎರಡು
ಗಾಲಿಗಳ ನಡುವೆ.
ಈ ಕ್ಷಣದಿ ಉಟ್ಟ ಬಟ್ಟೆ,
ನಿಂತ ನೆಲವಷ್ಟೇ ನನ್ನದು!
ದುಡಿದು ತಿನ್ನುವೆನೆಂಬ ಕೈಗೆ
ಕೊಡಿ ಕೆಲಸವನು
ಬಿಡಿಸಿ ತೋರುವೆ ನಿಮಗೆ
ದುಡಿಮೆಯ ಹಿರಿಮೆಯ ನಾನು.

● **ನಮಿತಾ**

## ಇಂದಿಲ್ಲಿ ನಾಳೆ ಎಲ್ಲೋ

ಹೊತ್ತು ತಂದಿರುವೆ ಈಗಷ್ಟೇ
ಹಿತ್ತಲಲ್ಲಿ ನೀರು
ಗೊಬ್ಬರ ಹಾಕಿ ಬೆಳದ ಕಾಯಿಪಲ್ಲೆ.
ಗಾಡಿಯ ನೆರಳಲಿ ತೆರೆದಿರುವೆ
ವಿಳಾಸವಿರದ ಅಂಗಡಿಯನು.
ಪೂರ್ವಕ್ಕಿದೆಯಾ, ಉತ್ತರಕ್ಕಿದೆಯಾ
ಮುಂಬಾಗಿಲು; ಲಕ್ಷ್ಮಿ ಬರುವಳೋ
ಬಾರಳೋ ತಲೆ ಬಿಸಿಯಿಲ್ಲ.
ನಾಳೆಗಳಿಗೆ ಜೋಪಾನ
ಮಾಡುವ ಚಿಂತೆಯಿಲ್ಲ.
ಲಾಭವೋ ನಷ್ಟವೋ ಯೋಚನೆಯಿಲ್ಲ.
ಈ ಹೊತ್ತಿನ ಪಾಡು ಕಳೆದರಾಯಿತು




ಒಪ್ಪೊತ್ತಿನ ತುತ್ತಿಗೆ ದಾರಿಯಾಗುವುದು
ಬನ್ನಿ ಕೊಳ್ಳಿ ತಾಜಾ ತರಕಾರಿಯ.
ಈ ನೆರಳು, ಈ ರಕ್ಷಣೆ,
ಗಾಡಿ ನಿಂತಷ್ಟು ಹೊತ್ತು ಮಾತ್ರ
ಅಲ್ಲಿಯವರೆಗೂ
ಈ ಜಾಗದ ಮಾಲೀಕಳು ನಾನು.
ಬಲ್ಲವರಾರು
ಇಂದು ಇಲ್ಲಿ
ನಾಳೆ ಇನ್ನೆಲ್ಲೊ...

● **ನಾಗರತ್ನ ಟಿ.ಎ.**

## ದೇಖರೇಖಾ

ಮುಖ ಎಂಬ ಕನ್ನಡಿಯೊಳಗ
ದೇಖರೇಖಾ ಮೂಡೇದ
ದರಿ ಎಂಬು ನೆಲಿಯೊಳಗ
ಕರಿ ಮೋಡ ಮೂಡೇದ

ಬಡತನ ಎಂಬ ಹೊಟ್ಟೆಯೊಳಗ
ನಡಗು ಹುಟ್ಟೇದ
ಗೇಣ ಅಳತಿ ಬಟ್ಟೆಯೊಳಗ
ಗಾಣ ಸುತ್ತೇದ.

ಮೂರು ದಿನದ ಸಂತಿಯೊಳಗ
ಮಾರೋದು ಏನದ
ಅವನ ಅವನಿಯೊಳಗ
ಕವನ ಮೂಡೇದ

ದುಡಿದ ಉಣ್ಣು ರಟ್ಟೆಯೊಳಗ
ಹಡಗ ಸಾಗೇದ
ಸುಖ ಮಲಗೇದ ಕಾಯಕದೊಳಗ
ದೇಖರೇಖಾ ಹಂಗ ಸಾಗೇದ

● **ಯು.ಜೆ. ಕುಲಕರ್ಣಿ, ಬೆಟಗೇರಿ**